

ಪ್ರತಿದಿನ ಅಪರಾಹ್ನ ಮಕ್ಕಳು ಶಾಲೆಯಿಂದ ಮನೆಗೆ ಮರಳುವಾಗ ಆ ರಾಕ್ಷಸನ ಹೂದೋಟಕ್ಕೆ ಹೋಗಿ ಆಟವಾಡುವ ಪರಿಪಾಟವಿತ್ತು. ಮೆತ್ತನೆಯ ಹುಲ್ಲು ಹಾಸಿದ ವಿಶಾಲವಾದ ಸುಂದರ ತೋಟ ಅದಾಗಿತ್ತು. ಆ ಹುಲ್ಲಿನ ಮೇಲೆ ಅಲ್ಲಲ್ಲಿ ಗೋಣುಚಾಚಿ ಎದ್ದು ನಿಂತ ಸುಂದರವಾದ ಹೂಗಳು ನಕ್ಷತ್ರಗಳಂತೆ ತೋರುತ್ತಿದ್ದವು. ಅಲ್ಲಿದ್ದ ಹನ್ನೆರಡು ಪೀಚ್ ಮರಗಳು ವಸಂತ ಕಾಲದಲ್ಲಿ ಗುಲಾಬಿ ಹಾಗೂ ಮುತ್ತಿನ ವರ್ಣದ ಹೂಗಳಿಂದ ಅಚ್ಛಾದಿತವಾಗುತ್ತಿದ್ದವು. ನಂತರ ಶರತ್ಕಾಲದಲ್ಲಿ ಹೇರಳವಾಗಿ ಹಣ್ಣು ಬಿಡುತ್ತಿದ್ದವು. ಹಕ್ಕಿಗಳು ಆ ಮರಗಳ ಮೇಲೆ ಕುಳಿತು ಮಧುರವಾಗಿ ಹಾಡುತ್ತಿದ್ದವು. ಮಕ್ಕಳು ತಮ್ಮ ಆಟ ನಿಲ್ಲಿಸಿ ಅವುಗಳ ಹಾಡು ಕೇಳುತ್ತ